**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 01-09-2021.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ 1 ರಿಂದ 3 ರವರ ಪರ ವಕೀಲರಿಂದ :**

**1)** ಕಲ್ಲಹಳ್ಳಿ ಗ್ರಾಮ ಜೋಡಿ ಗ್ರಾಮ ಎಂದರೆ ಸರಿ. ನಮ್ಮ ವಂಶಸ್ಥರು ತೋಟಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ತಾತನ ಹೆಸರು ತೋಟಿ ಗಂಗಪ್ಪ. ಆತ ತೋಟಿ ಕೆಲಸ ಮಾಡುತ್ತಿದ್ದರಿಂದ ಆತನಿಗೆ ತೋಟಿ ಗಂಗಪ್ಪ ಎಂಬ ಹೆಸರು ಬಂತು ಎಂದರೆ ಸರಿ. ಸದರಿ ತೋಟಿ ಗಂಗಪ್ಪ ಒಟ್ಟು ಕುಟುಂಬದ ಯಜಮಾನ ಎಂದರೆ ಸರಿಯಲ್ಲ. ಗಂಗಪ್ಪನ ಸಹೋದರ ಬಂಗ್ಪೆ ಈತನು 12-05-1964 ರಂದು 1 ನೇ ದಾವಾ ಆಸ್ತಿ ಪೈಕಿ 11 ಗುಂಟೆ ಆಸ್ತಿಯನ್ನು ಪ್ರತಿವಾದಿ 1 ಮತ್ತು 2 ರವರ ತಂದೆ ಪುಟ್ಟಪ್ಪನವರಿಗೆ ಮಾರಾಟ ಮಾಡಿದ್ದಾರೆ ಎಂದರೇ ಸುಳ್ಳು ದಾಖಲೆ ಮಾಡಿದ್ದಾರೆ ಎಂದು ಹೇಳುತ್ತಾರೆ. ಸದರಿ ಕ್ರಯಪತ್ರದಂತೆ ಅವರೇ ಸ್ವಾಧೀನದಲ್ಲಿ ಇದ್ದರು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸು ಬಾಕಿ ಇರುವ ಕಾರಣ ಅವರ ಹೆಸರಿಗೆ ಖಾತೆ ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ.

**2)** ದಿನಾಂಕಃ 04-06-1975 ರಂದು ಮುನಿಯಪ್ಪ ತಂದೆ ಗುಂಡ್ಲಪ್ಪ ತನಗೆ ಬಂದ 35 ಗುಂಟೆ ಭಾಗದಲ್ಲಿ 3 ಗುಂಟೆ ಆಸ್ತಿಯನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾನೆ ಎಂದರೆ ಸುಳ್ಳು ದಾಖಲೆ ಮಾಡಿಕೊಂಡಿರುತ್ತಾನೆ. ಸದರಿ ಮುನಿಯಪ್ಪ ನಮ್ಮ ಒಟ್ಟು ಕುಟುಂಬದ ಸದಸ್ಯನಾಗಿದ್ದ ಎಂದರೆ ಸರಿಯಲ್ಲ. ದಿನಾಂಕಃ 10-05-1964 ರಂದು ಅಣ್ಣಪ್ಪ ಮತ್ತು ಮುನಿಯಪ್ಪ ತಂದೆ ಗುಂಡ್ಲಪ್ಪ ಇವರು 3 ನೇ ಪ್ರತಿವಾದಿ ಯಳಗಮ್ಮ ಇವರಿಗೆ 9 ಗುಂಟೆ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು ದಾಖಲೆ ಮಾಡಿಕೊಂಡಿರುತ್ತಾರೆ.

**3)** ದಿನಾಂಕಃ 29-04-1975 ರಂದು ಕೆಂಪಣ್ಣ ತಂದೆ ಮಾರಣ್ಣ ಎಂಬುವವರು 5 ನೇ ಪ್ರತಿವಾದಿಗೆ 10 ಗುಂಟೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು ದಾಖಲೆ ಮಾಡಿಕೊಂಡಿರುತ್ತಾರೆ. ಸದರಿ ಕ್ರಯಪತ್ರದಲ್ಲಿ ಸರ್ವೆ ನಂ.35 ರ ಬದಲಾಗಿ ಸರ್ವೆ ನಂ.84/6 ಎಂದು ತಪ್ಪಾಗಿ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರದಲ್ಲಿ ಬರೆದ ಚೆಕ್ಕುಬಂದಿ ಸರ್ವೆ ನಂ.35 ರ 10 ಗುಂಟೆಗೆ ಹೊಂದಾಣಿಕೆ ಆಗುತ್ತದೆ ಎಂದರೆ ನನಗೆ ಗೊತ್ತಿಲ್ಲ.

**4)** ದಿನಾಂಕಃ 04-11-1975 ರಂದು ಮುನಿಗಂಗಪ್ಪ ಈತನು 4 ನೇ ಪ್ರತಿವಾದಿಗೆ 1 ನೇ ದಾವಾ ಆಸ್ತಿಯಲ್ಲಿ 25 ಗುಂಟೆ ಮಾರಾಟ ಮಾಡಿದ್ದಾನೆ ಎಂದರೆ ಸುಳ್ಳು ದಾಖಲೆ ಮಾಡಿಕೊಂಡಿರುತ್ತಾನೆ. ಮುನಿಗಂಗಪ್ಪ ಸಹ ನಮ್ಮ ಒಟ್ಟು ಕುಟುಂಬದ ಸದಸ್ಯ ಎಂದರೆ ಸರಿಯಲ್ಲ.

**5)** ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿಗಳ ಪರ ವಕೀಲರು ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,
ದೇವನಹಳ್ಳಿ.